**<u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಹಿರೇಕೆರೂರು.</u>**

**<u>ಸಿ.ಸಿ ನಂಬರ್ಃ 268/2018</u>**

ಪಿರ್ಯಾದಿಃ ಸರ್ಕಾರ, ಪ್ರತಿನಿಧಿಸುವವರು,
ರಟ್ಟಿಹಳ್ಳಿ ಪೊಲೀಸ್ ಠಾಣಾ ಪೋಲೀಸರು.

ವಿರುದ್ಧ

ಆರೋಪಿತರುಃ 01. ಲಿಯಾಕತ್ ತಂದೆ ಇಸ್ಮಾಯಿಲ್‌ಸಾಬ ಮೇಢ್ಲೇರಿ,
ವಯಸ್ಸುಃ 24 ವರ್ಷ.

02. ಪವನ ತಂದೆ ನಾರಾಯಣರಾಮ ಸೀರವಿ,
ವಯಸ್ಸುಃ 25 ವರ್ಷ.

ಆರೋಪಿ 1 ಮತ್ತು 2 ರವರು
ವಾಸಃ ರಟ್ಟಿಹಳ್ಳಿ ಗ್ರಾಮ, ಹಿರೇಕೆರೂರು
ತಾಲ್ಲೂಕು, ಹಾವೇರಿ ಜಿಲ್ಲೆ.

**<u>ದೋಷಾರೋಪಣೆ</u>**

ನಾನು ಶ್ರೀ. ಸಚಿನ್ ಡಿ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್,ಸಿ ನ್ಯಾಯಾಲಯ, ಹಿರೇಕೆರೂರು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

1. ರಟ್ಟಿಹಳ್ಳಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿನ ರಟ್ಟಿಹಳ್ಳಿ ಗ್ರಾಮದಲ್ಲಿ ದಿನಾಂಕಃ 29-10-2015 ರಂದು ಮುಂಜಾನೆ 10 ರಿಂದ ಮಧ್ಯಾಹ್ನ 12-30 ಗಂಟೆಯವರೆಗೆ ಆರೋಪಿತರಾದ ನೀವು ಉಳಿದ ಆರೋಪಿತರೊಂದಿಗೆ ಕೂಡಿಕೊಂಡು ಅಪರಾಧ ಮಾಡುವ ಉದ್ದೇಶದಿಂದ ವಿಧಿವಿರುದ್ದ ಕೂಟವನ್ನು ರಚಿಸಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 143 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

2. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಉಳಿದ ಆರೋಪಿತರೊಂದಿಗೆ ಸೇರಿಕೊಂಡು ಅಪರಾಧ ಮಾಡುವ ಉದ್ದೇಶ ಹೊಂದಿ ವಿಧಿವಿರುದ್ಧ ಕೂಟ ರಚಿಸಿಕೊಂಡು ಗೈರ ಕಾಯ್ದೆ ಶೀರ ಬಂದು ದೊಂಬಿ ಮಾಡಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 147 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

3. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಉಳಿದ ಆರೋಪಿತರೊಂದಿಗೆ ಸೇರಿಕೊಂಡು ಅಪರಾಧ ಮಾಡುವ ಉದ್ದೇಶ ಹೊಂದಿ ವಿಧಿವಿರುದ್ಧ ಕೂಟ ರಚಿಸಿಕೊಂಡು ಗೈರ ಕಾಯ್ದೆ ಶೀರ ಬಂದು ದೊಂಬಿ ಮಾಡಿ, ರಸ್ತೆಯ ಮೇಲೆ ಟೈಯರ್ ಗಾಲಿಗಳನ್ನು ಹಾಕಿ ಬೆಂಕಿ ಹಚ್ಚಿ ದಟ್ಟವಾದ ಘಾಟು ಹೊಗೆ ಎಬ್ಬಿಸಿ ಸಾರ್ವಜನಿಕರ ಉಸಿರಾಟಕ್ಕೆ ತೊಂದರೆ ಪಡಿಸಿ ಆರೋಗ್ಯಕ್ಕೆ ಹಾನಿಕಾರಕವಾಗುವಂತೆ ಮಾಡಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 278 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

4. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಉಳಿದ ಆರೋಪಿತರೊಂದಿಗೆ ಸೇರಿಕೊಂಡು ಅಪರಾಧ ಮಾಡುವ ಉದ್ದೇಶ ಹೊಂದಿ ವಿಧಿವಿರುದ್ಧ ಕೂಟ ರಚಿಸಿಕೊಂಡು ಗೈರ ಕಾಯ್ದೆ ಶೀರ ಮಂಡಳಿಯಾಗಿ ಕಾನೂನು ಸುವ್ಯವಸ್ಥೆಗೆ ತೊಂದರೆ ಕೊಡುವ ಉದ್ದೇಶದಿಂದ ಸಂಬಂಧಪಟ್ಟ ಇಲಾಖೆಯಿಂದ ಮತ್ತು ಪೊಲೀಸ್ ಇಲಾಖೆಯಿಂದ ಯಾವುದೇ ಪೂರ್ವಾನುಮತಿಯನ್ನು ಪಡೆಯದೇ ಏಕಾಏಕಿ ಮುಷ್ಕರ ಕೈಕೊಂಡು ರಟ್ಟಿಹಳ್ಳಿ ಗ್ರಾಮ ಪಂಚಾಯತಿಯಿಂದ ಹಳೇ ಬಸ್ ನಿಲ್ದಾಣ ಮುಖಾಂತರ ಹಾಯ್ದು ರಟ್ಟಿಹಳ್ಳಿ ಗ್ರಾಮದ ಚಿಕ್ಕಯಡಚಿ ಕ್ರಾಸ್ ಹತ್ತಿರ ಇರುವ ರಾಣೇಬೆನ್ನೂರಿನಿಂದ ರಟ್ಟಿಹಳ್ಳಿ ಮಾರ್ಗವಾಗಿ ಮಾಸೂರು ಕಡೆಗೆ ಹೋಗುವ ರಸ್ತೆಗೆ ಬಂದು ಸಾರ್ವಜನಿಕರಿಗೆ ತೊಂದರೆ ಕೊಡುವ ಉದ್ದೇಶದಿಂದ ಇರಾದೆಯಿಂದ ರಸ್ತೆಗೆ ಅಡ್ಡಲಾಗಿ ನಿಂತುಕೊಂಡು ರಸ್ತೆಯಲ್ಲಿ ಓಡಾಡುವ ಸಾರ್ವಜನಿಕ ವಾಹನಗಳನ್ನು ತರುಬಿ ನಿಲ್ಲಿಸಿ

ಸಂಚಾರಕ್ಕೆ ಅಡೆತಡೆ ಮಾಡಿ ಸಾರ್ವಜನಿಕರಿಗೆ ತೊಂದರೆಯಾಗುವಂತೆ ರಸ್ತಾರೋಖ ಚಳುವಳಿಯನ್ನು ಮಾಡಿದ್ದಲ್ಲದೇ ರಟ್ಟೆಹಳ್ಳಿ ಬಸ್ ನಿಲ್ದಾಣದಿಂದ ಮಹಾಲಕ್ಷ್ಮೀ ವೃತ್ತದವರೆಗಿನ ರಸ್ತೆ ದುರಸ್ಥಿ ಕಾಮಗಾರಿಯನ್ನು ಪ್ರಾರಂಭಿಸಿ ರಸ್ತೆಯನ್ನು ಎಬ್ಬಿ ಕಡಿಗಳನ್ನು ಹಾಕಿ 15 ದಿನಗಳು ಕಳೆದರು ಕೆಲಸ ಪ್ರಾರಂಭಿಸದೇ ಇರುವುದರಿಂದ ಈ ರಸ್ತೆಯಲ್ಲಿ ಓಡಾಡುವಂತಹ ಪ್ರಯಾಣಿಕರಿಗೆ ತೀವ್ರವಾದ ತೊಂದರೆ ಅನುಭವಿಸುವಂತೆ ಮಾಡಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 283 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

5. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಉಳಿದ ಆರೋಪಿತರೊಂದಿಗೆ ಸೇರಿಕೊಂಡು ಅಪರಾಧ ಮಾಡುವ ಉದ್ದೇಶ ಹೊಂದಿ ವಿಧಿವಿರುದ್ಧ ಕೂಟ ರಚಿಸಿಕೊಂಡು ಗೈರ ಕಾಯ್ದೆ ಶೀರ ಮಂಡಳಿಯಾಗಿ ಕಾನೂನು ಸುವ್ಯವಸ್ಥೆಗೆ ತೊಂದರೆ ಕೊಡುವ ಉದ್ದೇಶದಿಂದ ಸಂಬಂಧಪಟ್ಟ ಇಲಾಖೆಯಿಂದ ಮತ್ತು ಪೊಲೀಸ್ ಇಲಾಖೆಯಿಂದ ಯಾವುದೇ ಪೂರ್ವಾನುಮತಿಯನ್ನು ಪಡೆಯದೇ ಏಕಾಏಕಿ ಮುಷ್ಕರ ಕೈಕೊಂಡು ರಟ್ಟೆಹಳ್ಳಿ ಗ್ರಾಮ ಪಂಚಾಯತಿಯಿಂದ ಹಳೇ ಬಸ್ ನಿಲ್ದಾಣ ಮುಖಾಂತರ ಹಾಯ್ದು ರಟ್ಟೆಹಳ್ಳಿ ಗ್ರಾಮದ ಚಿಕ್ಕಯಡಚಿ ಕ್ರಾಸ್ ಹತ್ತಿರ ಇರುವ ರಾಣೇಬೆನ್ನೂರಿನಿಂದ ರಟ್ಟೆಹಳ್ಳಿ ಮಾರ್ಗವಾಗಿ ಮಾಸೂರು ಕಡೆಗೆ ಹೋಗುವ ರಸ್ತೆಗೆ ಬಂದು ಸಾರ್ವಜನಿಕರಿಗೆ ತೊಂದರೆ ಕೊಡುವ ಉದ್ದೇಶದಿಂದ ಇರಾದೆಯಿಂದ ರಸ್ತೆಗೆ ಅಡ್ಡಲಾಗಿ ನಿಂತುಕೊಂಡು ರಸ್ತೆಯಲ್ಲಿ ಓಡಾಡುವ ಸಾರ್ವಜನಿಕ ವಾಹನಗಳನ್ನು ತರುಬಿ ನಿಲ್ಲಿಸಿ ಸಂಚಾರಕ್ಕೆ ಅಡೆತಡೆ ಮಾಡಿ ಸಾರ್ವಜನಿಕರಿಗೆ ತೊಂದರೆಯಾಗುವಂತೆ ರಸ್ತಾರೋಖ ಚಳುವಳಿಯನ್ನು ಮಾಡಿರುತ್ತೀರಿ ಹಾಗೂ ರಟ್ಟೆಹಳ್ಳಿ ಬಸ್ ನಿಲ್ದಾಣದಿಂದ ಮಹಾಲಕ್ಷ್ಮೀ ವೃತ್ತದವರೆಗಿನ ರಸ್ತೆ ದುರಸ್ಥಿ ಕಾಮಗಾರಿಯನ್ನು ಪ್ರಾರಂಭಿಸಿ ರಸ್ತೆಯನ್ನು ಎಬ್ಬಿ ಕಡಿಗಳನ್ನು ಹಾಕಿ 15 ದಿನಗಳು ಕಳೆದರು ಕೆಲಸ ಪ್ರಾರಂಭಿಸದೇ ಇರುವುದರಿಂದ ಈ ರಸ್ತೆಯಲ್ಲಿ ಓಡಾಡುವಂತಹ ಪ್ರಯಾಣಿಕರಿಗೆ ತೀವ್ರವಾದ ತೊಂದರೆ ಅನುಭವಿಸುವಂತೆ ಮಾಡಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 341 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲೆ ಹೋರಿಸಿದ ಆರೋಪಗಳನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿದ್ದರಿಂದ ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದು ಎಂದು ಆದೇಶ ಮಾಡಿರುತ್ತೇನೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ಆರೋಪಗಳು ನಿಮಗೆ ತಿಳಿದಿದೆಯೋ?

ಆರೋಪಿ 1 ಉತ್ತರಃ ಹೌದು                    ಆರೋಪಿ 2 ಉತ್ತರಃ ಹೌದು

ಪ್ರಃ 2.  ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೊ?

ಆರೋಪಿ 1 ಉತ್ತರಃ ವಿಚಾರಣೆಯಾಗಬೇಕು.

ಆರೋಪಿ 2 ಉತ್ತರಃ ವಿಚಾರಣೆಯಾಗಬೇಕು.

(ಆರೋಪಿತರಿಗೆ ದಿನಾಂಕಃ 03.12.2018 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣಿಕರಿಸುತ್ತೇನೆ)

ಸಹಿ/-

ಹಿರೇಕೆರೂರು                    ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ
ದಿನಾಂಕಃ 03.12.2018.                    ನ್ಯಾಯಾಲಯ, ಹಿರೇಕೆರೂರು.

ಸಹಿ/-
1 ನೇ ಆರೋಪಿಯ ಸಹಿಃ

ಸಹಿ/-
2 ನೇ ಆರೋಪಿಯ ಸಹಿಃ